

ಕಲೆ: ನಾಗೇಶ ಹೆಗಡೆ

# ಗಜಲ್

ಗಿಜುಗುಡುವ ದಾರಿಗಳೆಲ್ಲ ಬೆತ್ತಲಾಗಿ ನಿಂತಿವೆ, ಏನಾಯಿತೀಗ ಈ ಶಹರಕೆ.
ಮೊರೆವ ಸಂತೆಗಳೆಲ್ಲ ಕರಗಿ ಹೋಗಿವೆ, ಏನಾಯಿತೀಗ ಈ ಶಹರಕೆ.

ಬಜಾರು–ಮಿನಾರುಗಳ ಮುಂದೆ ಈಗ ದಿಕ್ಕೆಡಿಸುವ ಸ್ಮಶಾನ ಮೌನ.
ಮೌನವೂ ದಣಿದು ವಿರಾಮ ಕೇಳುತಿದೆ, ಏನಾಯಿತೀಗ ಈ ಶಹರಕೆ.

ತುಂಬಿ ತುಳುಕ್ಯಾಡಿದ್ದ ಊರ ಜಾತ್ರೆ ಈಗ ಖಾಲಿ ಖಾಲಿ
ಮಸಣದ ಪಹರೆಯೀಗ ಊರ ಗಡಿ ದಾಟಿದೆ ಏನಾಯಿತೀಗ ಈ ಶಹರಕೆ

ಜಗದೆಲ್ಲ ಬಾಗಿಲುಗಳು ಮುಚ್ಚಿ ಹೋಗಿವೆ ಬೆಳದಿಂಗಳೆಗೂ ಹೆದರಿ.
ದೇವರಿಗೂ ಬೀಗ ಜಡಿದು ಕಟ್ಟಿ ಹಾಕಿದ್ದಾರೆ, ಏನಾಯಿತೀಗ ಈ ಶಹರಕೆ.

ಊರ ದೊರೆಯು ಬಡಬಡಿಸುತಿರುವನು ಅರ್ಧ ತೆರೆದ ಕಣ್ಣುಗಳಲಿ.
ತೋಳಗಳೂ ದಿಕ್ಕುಗೆಟ್ಟು ಊಳಿಡುತಿವೆ, ಏನಾಯಿತೀಗ ಈ ಶಹರಕೆ.

'ಮಹಾಂತ', ಯಾವ ಬ್ಯಾನಿಯು ನುಂಗಿತು ಈ ಶಹರದ ಗಂಟಲು?
ಎದೆಯ ಮಾತುಗಳೇ ಮರೆತುಹೋಗಿವೆ, ಏನಾಯಿತೀಗ ಈ ಶಹರಕೆ.

● **ಮಹಾಂತೇಶ ಗೋನಾಲ**

